ಒಂದು ಲೆವೆಲ್‌ಗೆ ಎಲ್ಲಾ ಸೆಟ್ಲಾಯ್ತಿವಿ" ಎಂದ. ಅವನು ಅಗಿದು ರಸಹೀರಿ ಉಗಿದಿರುವ ಈ ಕಬ್ಬಿನ ಸಿಪ್ಪೆಯಲ್ಲಿ ಇರುವೆಗೇನೂ ಕೆಲಸವಿರಲಿಲ್ಲ. ಆದರೂ ಇರುವೆಗೆ ಆಸೆ. ಎಲ್ಲೋ ಒಂದು ಮೂಲೆಯಲ್ಲಿ ಚೂರಾದರೂ ರಸ ಇರಬಹುದೆಂದು. ಇಪ್ಪತ್ತು ತುಂಬುವುದರೊಳಗೆ ಮೂರು ಜನರನ್ನು ಕಂಡಿದ್ದ ನಾನು, ನನ್ನೊಂದಿಗೆ ಸುಖಿಸಲು ಬಯಸುವ ನಾಲ್ಕನೇ ಮನುಷ್ಯ ಯಾರು ಎಂಬ ಕುತೂಹಲ ನನ್ನಲ್ಲಿ ಮೂಡಿತು. "ಹೇಳು, ಎಷ್ಟು ದೊಡ್ಡ ಮನಸ್ಸು ಮಾಡ್ಬೇಕು" ಎಂದೆ ವ್ಯಂಗ್ಯವಾಗಿ. "ಈ ಶನಿವಾರ ಜಿ.ಎಂ.ನಾ ನಮ್ಮನೆಗೆ ಕರ್ದಿದೀನಿ" ಎಂದ. ಅವನು ನಾನು ಮದುವೆಯಾದವನಿಗಿಂತ ಪರಮ ನೀಚ ಎನಿಸಿತು. ನನಗೆ ಕೋಪ ಬರುತ್ತಿತ್ತು. ಕೆಟ್ಟದಾಗಿ ಏನಾದರೂ ಅನ್ನಬೇಕೆನಿಸುತ್ತಿತ್ತು. ಆದರೂ ನಿಯಂತ್ರಿಸಿಕೊಂಡು ಮೌನವಾಗಿದ್ದೆ. ಕೆಟ್ಟಿದ್ದ ಮನಸ್ಸನ್ನು ಶಾಂತಗೊಳಿಸಲು ಪುಸ್ತಕದ ಮೊರೆ ಹೋಗಿದ್ದ ನಾನು 'ದಬ್ಬಾಳಿಕೆ ಮಾಡುವವರದ್ದು ಎಷ್ಟು ತಪ್ಪೋ, ಅದ್ನ ಸಹಿಸಿಕೊಳ್ಳುವವರದ್ದು ಅಷ್ಟೆ ತಪ್ಪು' ಎನ್ನುವ ಒಂದು ವಾಕ್ಯ ಎಲ್ಲೋ ಓದಿದ್ದೆ. ಅದರ ಜೊತೆಗೆ ವಯಸ್ಸು ಹೆಚ್ಚಾಗುತ್ತಿದ್ದಂತೆ ಧೈರ್ಯಕೂಡ ಬಂದಿತ್ತು. ಇಂತಹ ಬ್ಲಾಕ್‌ಮೇಲ್‌ಗೆ ಪೊಲೀಸ್ ಕಂಪ್ಲೇಂಟ್ ಕೊಡಬಹುದೆನ್ನುವುದೂ ತಿಳಿದಿತ್ತು. ಇತ್ತೀಚೆಗೆ ಅವನ ವಿರುದ್ಧ ಬಂಡೇಳಲು ಮನಸ್ಸು ಪ್ರೇರೇಪಿಸುತ್ತಿತ್ತು. ಆದರೆ, ಸಮಯ ಬಂದಿರಲಿಲ್ಲ. ಅವನು ನನ್ನ ಮೌನವನ್ನು ಒಪ್ಪಿಗೆ ಎಂದು ತಿಳಿದು, "ನಂಗೆ ಗೊತ್ತು ನೀನು ಬೇಡ ಅನ್ನಲ್ಲಾ ಅಂತ. ನಿಂಗೆ ಇದೆಲ್ಲ ಕಾಮನ್. ಮೂರು ಜನ ಆಗೋಗಿದ್ದಾರೆ, ಇನ್ನೊಬ್ಬ ಆದ್ರೆ ಏನಂತೆ ಅಲ್ವಾ?" ಎಂದ. "ಒಂದುವೇಳೆ ನಾನು ಆಗಲ್ಲಾಂದ್ರೆ" ಎಂದೆ. "ಇದ್ನ ಫೇಸ್‌ಬುಕ್‌ನಲ್ಲಿ ಹಾಕ್ತೀನಿ" ಎಂದು ಆ ಮೂರುಇಂಚು ಉದ್ದದ ಫೋನ್ ತೋರಿದಾಗ ಕೋಪ ಹೇಗೆ ಬಂತೆಂದು ನನಗೆ ಗೊತ್ತಿಲ್ಲ. ಹಾಕಿದ್ದ ಬಟ್ಟೆ ಕಿತ್ತು ಬಿಸಾಕಿ, "ಅದು ಚೆನ್ನಾಗಿಲ್ಲ, ಇದ್ನ ವಿಡಿಯೊ ಮಾಡಿ ಅದೆಲ್ಲಿ ಹಾಕ್ತಿ ಹಾಕ್ಕೊ. ಫೇಸ್‌ಬುಕ್‌ನಲ್ಲಿ ಹಾಕ್ತಿಯೋ, ಯು ಟ್ಯೂಬ್‌ನಲ್ ಹಾಕ್ತಿಯೋ, ಸಿ.ಡಿ. ಮಾಡಿ ಹಂಚ್ತಿಯೋ ಹಂಚ್ಕೊ. ಮಾತಿಗ್ಮುಂಚೆ ಇದ್ನ ತೋರ್ಸಿ ನನ್ನ ಹೆದ್ರುಸ್ಬೇಡ. ನಾನು ಇನ್ಮೇಲೆ ಇದ್ಕೆಲ್ಲ ಹೆದ್ರಲ್ಲ. ಅದೇನು ಮಾಡ್ಕೊತಿಯೋ ಮಾಡ್ಕೋ ಹೋಗಲೆ ಇಡಿಯಟ್" ಎಂದು ಕಿರುಚಿದೆ. ಮುಚ್ಚಿಕೊಳ್ಳಲು ಈಗ ನನ್ನ ಬಳಿ ಏನು ಉಳಿದಿರಲಿಲ್ಲ. ನಾಲ್ಕುಗೋಡೆಗಳ ನಡುವೆ ನನ್ನ ಇಷ್ಟಕ್ಕೆ ವಿರುದ್ಧವಾಗಿ ಮೂರು ಜನ ಬೆತ್ತಲುಗೊಳಿಸಿದ ಈ ದೇಹವನ್ನು ಮತ್ತೆ ಎಷ್ಟು ಜನ ನೋಡಿದರೆ ಏನು. ಅದೆಷ್ಟು ಜನಕ್ಕೆ ತೋರಿಸಲು ಸಾಧ್ಯವೋ ತೋರಿಸು' ಎಂದು ಅವನಿಗೆ ಸವಾಲು ಹಾಕಿ ನನ್ನ ಬಟ್ಟೆಗಳನ್ನು ತುಂಬಿಸಿಕೊಳ್ಳತೊಡಗಿದೆ. ನನ್ನಿಂದ ಇಂತಹ ಪ್ರತಿಕ್ರಿಯೆ ನಿರೀಕ್ಷಿಸದ ಅವನಿಗೆ ಕೋಪ ಬಂದಿತ್ತು. ಆ ಫೋನ್‌ನಲ್ಲಿ ಇದ್ದ ವಿಡಿಯೊದ ಆಯಸ್ಸು ಮುಗಿದಿದ್ದರಿಂದ ಅದನ್ನು ತೋರಿಸಿ ಹೆದರಿಸುವಂತಿರಲಿಲ್ಲ. ಆದ್ದರಿಂದ ನಾಲ್ಕಾರು ಏಟು ಹೊಡೆದೆಬಿಟ್ಟ. 'ದಬ್ಬಾಳಿಕೆ ಸಹಿಸ್ಕೊಳ್ಳುವುದು ಅಷ್ಟೆ ತಪ್ಪು' ನೆನೆಪಾಗಿ ನಾನು ಉಗ್ರಕಾಳಿಯಾಗಿಬಿಟ್ಟೆ. ಕೊನೆಯ ಅಸ್ತ್ರವೆನ್ನುವಂತೆ 'ಪೊಲೀಸ್' ಎಂದೆ. ಅವನ ರಸಿಕತೆ ಆ ಕ್ಷಣಕ್ಕೆ ಜರ್‍ರನೆ ಇಳಿಯಿತು. ನಾನು ಆ ರಾತ್ರಿಯೇ ಟ್ರೈನ್ ಹತ್ತಿ ಅಮ್ಮನ ಬಳಿ ಹೋಗಿಬಿಟ್ಟೆ" ಎನ್ನುವಷ್ಟರಲ್ಲಿ ನಮ್ಮ ಊಟದ ಸಮಯ ಮುಗಿದಿತ್ತು. ಮುಂದಿನ ಭಾಗಕ್ಕೆ ಮತ್ತೆ ಇಪ್ಪತ್ನಾಲ್ಕು ಗಂಟೆ ಕಾಯಬೇಕಿತ್ತು.

ಟೀವಿ ಧಾರಾವಾಹಿಗಳಲ್ಲಿ ತೋರಿಸುವಂತೆ 'ಹಿಂದಿನ ಸಂಚಿಕೆಯಲ್ಲಿ...' ಎನ್ನುವ ಯಾವ ವಿವರವನ್ನು ಕೊಡದೆ ನಿಲ್ಲಿಸಿದ ಕಡೆಯಿಂದ ಕತೆ ಶುರು ಮಾಡುವುದು ಅವಳಿಗೆ ರೂಢಿಯಾಗಿಬಿಟ್ಟಿತ್ತು. "ಅಮ್ಮನಿಗೆ ಹೇಳಬೇಕೆನಿಸಲಿಲ್ಲ. ಏನೆಂದು ಹೇಳುವುದು? ಎರಡು ಮೂರು ತಿಂಗಳು ಊರಲ್ಲಿಯೇ ಇದ್ದು ನಂತರ ತಿಳಿದವರ ಸಹಾಯದಿಂದ ಈ ಬೊಮ್ಮನಹಳ್ಳಿ ಏರಿಯಾಗೆ ಬಂದೆ. ನನಗೆ ಟೈಲರ್ ಕೆಲಸ ಬಿಟ್ರೆ ಬೇರೆ ಕೆಲ್ಸ ಗೊತ್ತಿಲ್ಲ. ಮತ್ತೆ ನಾನು ಟೈಲರ್ ಆಗಿ ಕೆಲ್ಸಕ್ಕೆ